ಇ) *ಈ ಕಾಯಿಲೆಯನ್ನು ತಡೆಯಲು ತೆಗೆದುಕೊಂಡ ಕ್ರಮಗಳೇನು?*

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಈ ಕಾಯಿಲೆಗೆ ಕಾರಣಗಳು :

1. ಅನಾರೋಗ್ಯಕರ ಪರಿಸರ
2. ರೋಗನಿರೋಧಕ ಲಸಿಕೆ ಮಾಡಿಸದ ಸಾಕು ಪ್ರಾಣಿಗಳು
3. ಅಸಮರ್ಪಕ ಮತ್ತು ಅವೈಜ್ಞಾನಿಕವಾಗಿ ಕಸ ಕಲ್ಮಶಗಳನ್ನು ವಿಲೇವಾರಿ ಮಾಡುವಿಕೆ.
4. ಇಲಿ, ಹೆಗ್ಗಣಗಳ ಇತ್ಯಾದಿಗಳ ಹೆಚ್ಚಿನ ಸಾಂದ್ರತೆ.

ಇ) ಚಿಕಿತ್ಸೆ ಮಾಡಿದ ರೋಗಿಗಳ ಸಂಖ್ಯೆ

	ಸರ್ಕಾರಿ ಆಸ್ಪತ್ರೆ	ಖಾಸಗಿ ಆಸ್ಪತ್ರೆ
ಬೆಂಗಳೂರು	1	5
ಮೈಸೂರು	101	4

ಡಿ) ಬಂದಿರುವುದಿಲ್ಲ (ಸೌಲಭ್ಯ ಲಬ್ಯವಿದೆ)

ಇ) ಕಾಯಿಲೆಯನ್ನು ತೆಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ರೋಗಿಗಳ ಚಿಕಿತ್ಸೆ.
2. ಇಲಿ, ಹೆಗ್ಗಣ ಇತ್ಯಾದಿಗಳು ವೃದ್ಧಿಯಾಗದಂತೆ ನೋಡಿಕೊಳ್ಳುವುದು.
3. ನೈರ್ಮಲ್ಯ ಮತ್ತು ಕಾಯಿಲೆಯ ಬಗ್ಗೆ ಆರೋಗ್ಯ ಶಿಕ್ಷಣ.

ವಿಶ್ವಬ್ಯಾಂಕ್ ನೆರವಿನಿಂದ ಬಳ್ಳಾರಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆ ಮತ್ತು ನೈರ್ಮಲ್ಯ ಕಾಮಗಾರಿ.

1511 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸರ್ಕಾರವು ವಿಶ್ವಬ್ಯಾಂಕ್ ನೆರವಿನ ಯೋಜನೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ ಮೊದಲನೇ ಹಂತದಲ್ಲಿ ಈಗಾಗಲೇ ಎಷ್ಟು ಗ್ರಾಮಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಎಷ್ಟು ಗ್ರಾಮಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದೆ?

ಇ) ಬಳ್ಳಾರಿ ಜಿಲ್ಲೆಗೆ ನಿಗದಿಪಡಿಸಿದ ಒಟ್ಟು ಅನುದಾನದ ಮೊತ್ತ ಎಷ್ಟ? ಹಾಗೂ ಈವರೆವಿಗೆ ಖರ್ಚು ಮಾಡಿದ ಹಣ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

(ಅ) ಹೌದು

ಆ) ಬಳ್ಳಾರಿ ಜಿಲ್ಲೆಯಲ್ಲಿ ಮೊದಲನೇ ಹಂತದ ಎಲ್ಲ 27 ಗ್ರಾಮಗಳಲ್ಲಿ (ಒಂದು ಮಾದರಿ ಗ್ರಾಮವೂ ಸೇರಿ) ನೀರು ಸರಬರಾಜು ಮತ್ತು ಪರಿಸರ ಕಾಮಗಾರಿಗಳನ್ನು ಕೈಗತ್ತಿಕೊಳ್ಳಲಾಗಿದೆ.

ಇ) ಬಳ್ಳಾರಿ ಜಿಲ್ಲೆಯಲ್ಲಿ ಮೊದಲ ಹಂತದ ಗ್ರಾಮಗಳ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಕಾಮಗಾರಿಗಳ ಅಂದಾಜು ವೆಚ್ಚ 12.92 ಕೋಟಿ ರೂಪಾಯಿಗಳು. ಇದರಲ್ಲಿ, ಈವರೆವಿಗೆ 11.01 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಪಾಲಿಟೆಕ್ನಿಕ್ ಮತ್ತು ತಾಂತ್ರಿಕ ಕಾಲೇಜುಗಳ ಪ್ರಾರಂಭ

1512 - ಶ್ರೀ ಬಸವರಾಜ್. ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ತಾಂತ್ರಿಕ ಪಾಲಿಟೆಕ್ನಿಕ್ ಮತ್ತು ತಾಂತ್ರಿಕ ಕಾಲೇಜು ಪ್ರಾರಂಭಿಸಲು ಸರ್ಕಾರವು ಪರಿವಾನಿಗೆ ನೀಡಿರುತ್ತದೆ. (ವಿವರ ನೀಡುವುದು)

ಆ) ರಾಜ್ಯದಲ್ಲಿರುವ ಒಟ್ಟು ತಾಂತ್ರಿಕ ಪಾಲಿಟೆಕ್ನಿಕ್‌ಗಳು ಮತ್ತು ತಾಂತ್ರಿಕ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಅವುಗಳು ಯಾವುವು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) **1994-1995**

ಪಾಲಿಟೆಕ್ನಿಕ್		ಇಂಜಿನಿಯರಿಂಗ್	
ಸರ್ಕಾರಿ	ಖಾಸಗಿ	ಸರ್ಕಾರಿ	ಖಾಸಗಿ
ಇಲ್ಲ	1) ಲಕ್ಷ್ಮಣರಾವ್ ಜಾರಕಿಹೊಳಿ ಪಾಲಿಟೆಕ್ನಿಕ್ ಗೋಕಾಕ್	ಇಲ್ಲ	ಇಲ್ಲ
	2) ಕಾಲಭೈರವೇಶ್ವರ ಪಾಲಿಟೆಕ್ನಿಕ್ ಬೆಂಗಳೂರು		